ಬೆಂಗಳೂರು ಜಲ ಮಂಡಳಿಯು ಬೆಂಗಳೂರು ನಗರ ಪ್ರದೇಶ ಹಾಗೂ ಬೆಂಗಳೂರು ಸುತ್ತಲಿರುವ ಏಳು ನಗರಸಭೆ ಮತ್ತು ಒಂದು ಪುರಸಭೆಗಳಿಗೆ ನೀರು ಪೂರೈಸಲು ನೀರಿನ ಅಭಾವವಿರುವುದರಿಂದ ಇತರೆ ಪಟ್ಟಣಗಳಿಗೆ ಕಾವೇರಿ ನೀರು ಒದಗಿಸಲು ಸಾಧ್ಯವಾಗುವುದಿಲ್ಲ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1082(1535)
ಸದಸ್ಯರ ಹೆಸರು : ಡಾ: ಅನ್ನದಾನಿ ಕೆ. (ನೆಲಮಂಗಲ)
ಉತ್ತರಿಸುವ ಸಚಿವರು : ಶ್ರೀ ಹೆಚ್.ಡಿ.ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ರಾಷ್ಟ್ರೀಯ ಹೆದ್ದಾರಿ 209 ರ ರಸ್ತೆಯು ಮಳವಳ್ಳಿ ತಾಲ್ಲೂಕಿನ ವ್ಯಾಪ್ತಿಯಲ್ಲಿ ದಳವಾಯಿ ಕೋಡಹಳ್ಳಿಯಿಂದ ಹಾಡ್ಲಿ ಸರ್ಕಲ್ ಮಾರ್ಗ ನಾಗೇಗೌಡನದೊಡ್ಡಿಯವರೆಗೆ ಸಂಪೂರ್ಣ ಹದಗೆಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಸರ್ಕಾರದ ಗಮನಕ್ಕೆ ಬಂದಿದೆ.

ಆ) ಪೂರ್ಣ ಪ್ರಮಾಣದಲ್ಲಿ ಕೆಟ್ಟಿರುವ ಈ ರಸ್ತೆಯ ದುರಸ್ತಿಗೆ ಕಳೆದ ಮೂರು ವರ್ಷಗಳಲ್ಲಿ ಯಾವ ಕ್ರಮವನ್ನು ಸರ್ಕಾರ ಕೈಗೊಂಡಿದೆ?

ರಾಹೆ–209, ದಿಂಡಿಗಲ್–ಬೆಂಗಳೂರು ಭಾಗದ ಕಿಮೀ 373.00 ರಿಂದ ಕಿಮೀ 399.00 ರವರೆಗಿನ ಮಳವಳ್ಳಿ ತಾಲ್ಲೂಕಿನ ವ್ಯಾಪ್ತಿಯಲ್ಲಿರುವ ದಳವಾಯಿ ಕೊಡಹಳ್ಳಿಯಿಂದ ಹ್ಯಾಡ್ಲಿ ಸರ್ಕಲ್ ಮಾರ್ಗ ನಾಗೇಗೌಡನ ದೊಡ್ಡಿವರೆಗಿನ ರಸ್ತೆ ದುರಸ್ತಿಗೆ ಕೈಗೊಂಡಿರುವ ಕ್ರಮದ ಮಾಹಿತಿಯು ಈ ಕೆಳಗಿನಂತಿದೆ:

1) ರಾಹೆ–209 ದಿಂಡಿಗಲ್–ಬೆಂಗಳೂರು ಭಾಗದ ಕಿಮೀ 373.00 ರಿಂದ ಕಿಮೀ 380.00 ರವರೆಗಿನ ರಸ್ತೆ ಅಗಲೀಕರಣ ಕಾಮಗಾರಿಯು 2006ನೇ ಫೆಬ್ರವರಿಯಲ್ಲಿ ರೂ.481.778 ಲಕ್ಷಗಳಿಗೆ ತಾಂತ್ರಿಕ ಅನುಮೋದನೆಯಾಗಿದ್ದು ಈ ಕಾಮಗಾರಿಯನ್ನು ಟೆಂಡರಿನ ಆಧಾರದ ಮೇಲೆ ಗುತ್ತಿಗೆಯನ್ನು ವಹಿಸಲಾಗಿದ್ದು, 2007ನೇ ಡಿಸೆಂಬರ್ ಅಂತ್ಯದೊಳಗಾಗಿ ಕಾಮಗಾರಿಯನ್ನು ಪೂರ್ಣಗೊಳಿಸಲಾಗುವುದು.

2) ರಾಹೆ–209 ದಿಂಡಿಗಲ್–ಬೆಂಗಳೂರು ಭಾಗದ ಕಿಮೀ 380.00 ರಿಂದ ಕಿಮೀ 386.00 ರವರೆಗಿನ ರಸ್ತೆ ಅಗಲೀಕರಣ ಹಾಗೂ ಪುನರ್ ನಿರ್ಮಿಸುವ ಕಾಮಗಾರಿಗೆ ರೂ.600.00 ಲಕ್ಷಗಳಿಗೆ ಅಂದಾಜುಪಟ್ಟಿಯನ್ನು ತಯಾರಿಸಿ ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯಕ್ಕೆ ಅನುಮೋದನೆಗಾಗಿ

ಸಲ್ಲಿಸಲಾಗಿದೆ. ಅನುಮೋದನೆಯು ನಿರೀಕ್ಷೆ ಹಂತದಲ್ಲಿದ್ದು ಸದ್ಯದಲ್ಲೇ ಟೆಂಡರ್ ಮುಖೇನ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು. ಈ ಭಾಗದ ರಸ್ತೆಯನ್ನು ದುರಸ್ತಿಗೊಳಿಸಿ ಸುಸ್ಥಿತಿಯಲ್ಲಿಡಲಾಗಿದೆ.

3) ರಾಹೆ–209 ದಿಂಡಿಗಲ್–ಬೆಂಗಳೂರು ಭಾಗದ ಕಿಮೀ 386.00 ರಿಂದ ಕಿಮೀ 392.00 ರವರೆಗಿನ ರಸ್ತೆ ಅಗಲೀಕರಣ ಹಾಗೂ ಪುನರ್ ನಿರ್ಮಿಸುವ ಕಾಮಗಾರಿಯು ಫೆಬ್ರವರಿ 2006 ರಲ್ಲಿ ರೂ.364.22 ಲಕ್ಷಗಳಿಗೆ ತಾಂತ್ರಿಕ ಅನುಮೋದನೆಯಾಗಿದ್ದು ಈ ಕಾಮಗಾರಿಯನ್ನು ಟೆಂಡರಿನ ಆಧಾರದ ಮೇಲೆ ವಹಿಸಲಾಗಿದೆ. ಸದರಿ ಕಾಮಗಾರಿಯಲ್ಲಿ ರಸ್ತೆಯ ಅರ್ಧ ಭಾಗದ 3 ಕಿಮೀ ಉದ್ದಕ್ಕೆ ಮೆಂಟ್ಲಿಂಗ್ ಮತ್ತು ಬಿಟುಮಿನಸ್ ಮೆಕಾಡಮ್ ಕಾಮಗಾರಿಯನ್ನು ಪೂರ್ಣಗೊಳಿಸಲಾಗಿದೆ. ಉಳಿದ ಕಾಮಗಾರಿಯು ಪ್ರಗತಿಯಲ್ಲಿದೆ ಹಾಗೂ 2007ನೇ ಮೇ ಅಂತ್ಯದೊಳಗಾಗಿ ಪೂರ್ಣಗೊಳಿಸಲಾಗುವುದು.

ರಾಹೆ–209 ದಿಂಡಿಗಲ್–ಬೆಂಗಳೂರು ಭಾಗದ ಕಿಮೀ 392.00 ರಿಂದ ಕಿಮೀ 402.00 ರವರೆಗಿನ ರಸ್ತೆ ಅಗಲೀಕರಣ (2 ಪಥ ರಸ್ತೆ ವಿಸ್ತರಣೆ) ಕಾಮಗಾರಿಗೆ ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯದಿಂದ 2004–05ನೇ ಸಾಲಿನ 2004ನೇ ಅಕ್ಟೋಬರ್‌ನಲ್ಲಿ ಅನುಮೋದನೆಯಾಗಿರುತ್ತದೆ. ಸದರಿ ಕಾಮಗಾರಿಗೆ 2004–05ನೇ ಸಾಲಿನ ಆಗಸ್ಟ್ 2004ರಲ್ಲಿ ಟೆಂಡರ್ ಕರೆಯಲಾಗಿದ್ದು, ಸದರಿ ಕಾಮಗಾರಿಯ ಪ್ರಾರಂಭದ ದಿನ 1.2.2005 ಮತ್ತು ಮುಕ್ತಾಯದ ದಿನ 29.10.2005 ಆಗಿತ್ತು. ಆದರೆ ಸದರಿ ಕಾಮಗಾರಿಯನ್ನು ನಿಗದಿತ ಕಾಲಾವಧಿಯಲ್ಲಿ ಪೂರ್ಣಗೊಳಿಸುವಲ್ಲಿ ಗುತ್ತಿಗೆದಾರರು ವಿಫಲರಾಗಿರುತ್ತಾರೆ. ಆದಕಾರಣ, ಕಾಮಗಾರಿಯನ್ನು ಗುತ್ತಿಗೆ ಕರಾರಿನ (ಪಿಡಬ್ಲ್ಯೂಜಿ–65 ರಂತೆ) ನಿಯಮಾನುಸಾರ ಕಾಮಗಾರಿಯನ್ನು ಮೂಲ ಗುತ್ತಿಗೆದಾರರ "ಜವಾಬ್ದಾರಿ ಮತ್ತು ವೆಚ್ಚ"ದಲ್ಲಿ ಜುಲೈ–2006 ರಲ್ಲಿ ರದ್ದುಗೊಳಿಸಲಾಗಿದೆ. ಉಳಿಕೆ ಕಾಮಗಾರಿಯನ್ನು ಜುಲೈ 2006 ರಲ್ಲಿ ಮರುಟೆಂಡರು ಕರೆದು, ಟೆಂಡರ್ ಪ್ರೀಮಿಯಂ ಅತಿ ಹೆಚ್ಚು ಬಂದಿರುವುದರಿಂದ ಮರು ಟೆಂಡರ್ ಕರೆಯಲಾಗಿದೆ ಹಾಗೂ ಇದರ ಜೊತೆಗೆ ಪರಿಷ್ಕೃತ ಅಂದಾಜುಪಟ್ಟಿಗೆ ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಮಂತ್ರಾಲಯದ ಅನುಮೋದನೆ ದೊರೆಯಬೇಕಿದ್ದು, ಮಾರ್ಚ್ 2007 ರ ಅಂತ್ಯದ ವೇಳೆಗೆ ಅನುಮೋದನೆ ನಿರೀಕ್ಷಿಸಲಾಗಿದೆ. ಸದರಿ ಪರಿಷ್ಕೃತ ಅಂದಾಜಿಗೆ ಅನುಮೋದನೆ ದೊರೆತ ನಂತರ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು.